ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1948ನೇ ಸಾಲಿನ ವಿದ್ಯುಚ್ಛಕ್ತಿ ಅಧಿನಿಯಮದ 65ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಪಡೆಯಲೆಂದು ನಿಗಧಿಗೊಳಿಸಿರುವ ಮೊತ್ತ 1,750 ಕೋಟಿ ರೂಪಾಯಿಗಳಿಂದ 2,100 ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ನಿರ್ಣಯವನ್ನು ಈ ಸಭೆಯ ಅಂಗೀಕರಿಸುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ನಿರ್ಣಯಕ್ಕೆ ಅನುಮೋದನೆ ನೀಡಲಾಯಿತು.

ಅಭಿನಂದನಾ ನಿರ್ಣಯ

ಅಧ್ಯಕ್ಷರು : ಶತಾಯುಷಿ ಶ್ರೀ ಎ.ಎಸ್.ಮೂರ್ತಿರಾಯರಿಗೆ ಅಭಿನಂದನೆಯನ್ನು ಸಲ್ಲಿಸಲು ಸಂತೋಷಿಸುತ್ತೇನೆ. ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ನರಸಿಂಹಮೂರ್ತಿರಾಯರು ಜೂನ್ 1900ರಂದು ಜನಿಸಿದರು. ಇವರು ಮಾಧ್ಯಮಿಕ ವಿದ್ಯಾಭ್ಯಾಸ ಸ್ವಂತ ಊರಿನಲ್ಲಿ ಮಾಡಿದ ಮೂರ್ತಿರಾಯರು ಮುಂದಿನ ಓದಿಗಾಗಿ ಮೈಸೂರಿಗೆ ಹೋದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲೀಷ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ನಂತರ ಇವರು ಕಾಲೇಜಿನಲ್ಲಿ ಅಧ್ಯಾಪಕರಾಗಿ, ಸೂಪರಿಂಟೆಂಡೆಂಟ್ ಆಗಿ ಆಕಾಶವಾಣಿಯ ಅಧಿಕಾರಿಯಾಗಿ, ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ, ಕನ್ನಡ ಸಾಹಿತ್ಯಪರಿಷತ್ತಿನ ಕಾರ್ಯದರ್ಶಿಯಾಗಿ ಹೀಗೆ ವಿವಿಧ ರಂಗಗಳಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಜೊತೆ ಅವಿನಾಭಾವ ಸಂಬಂಧವನ್ನು ರೂಢಿಸಿಕೊಂಡು ಕನ್ನಡಕ್ಕಾಗಿ ದುಡಿದ ಧೀಮಂತರು. ಕಳೆದ ಜೂನ್ ತಿಂಗಳಿನಲ್ಲಿ 100ನೆಯ ವಸಂತದಲ್ಲಿ ಕಾಲಿರಿಸಿದ ಮೂರ್ತಿ ರಾಯರಿಗೆ ಕನ್ನಡ ಹಿರಿಯ ಸಾಹಿತಿ ಮಾಸ್ತಿಯವರ ಹೆಸರಿನಲ್ಲಿರುವ ಮಾಸ್ತಿ ಪ್ರಶಸ್ತಿಯನ್ನು ಪ್ರಧಾನ ಮಾಡಿರುವುದು ಉಳಿದೆಲ್ಲಾ ಪ್ರಶಸ್ತಿಗಳಿಗಿಂತ ಹೆಚ್ಚು ಮಹತ್ವಪೂರ್ಣವಾದುದು. ಕೇಂದ್ರಸಾಹಿತ್ಯ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಪ್ರಶಸ್ತಿ, ಮತ್ತು ಪಂಪ ಪ್ರಶಸ್ತಿಗಳು ಇವರಿಗೆ ಈಗಾಗಲೇ ಲಭ್ಯವಾಗಿದೆ. ಮೂರ್ತಿರಾಯರು ಲಲಿತಾ ಪ್ರಬಂಧ, ವಿಮರ್ಶೆ, ಪ್ರವಾಸ ಸಾಹಿತ್ಯಗಳಲ್ಲಿ ಎಷ್ಟೋ ಸತ್ವಶಾಲಿ ಕೃತಿಗಳನ್ನು ರೂಪಾಂತರ ಮತ್ತು ಭಾಷಾಂತರಗಳಲ್ಲೂ ನೀಡಿದ್ದಾರೆ. ಇವರು ಕನ್ನಡ ಗದ್ಯಕ್ಕೆ ಕಾವ್ಯದ ಲಾಲಿತ್ಯವನ್ನು ವೈಜಾರಿಕತೆಯ ಗಟ್ಟಿತನವನ್ನು ತಂದುಕೊಟ್ಟ ಅಪ್ರತಿಮ ಲೇಖಕರು. ಡಾ. ಕೆ. ಶಿವರಾಮಕಾರಂತರ "ಮರಳಿ ಮಣ್ಣಿಗೆ" ಕಾದಂಬರಿಯನ್ನು ಮೂರ್ತಿರಾಯರು ಇಂಗ್ಲೀಷಿಗೆ ಅನುವಾದಿಸಿದ್ದಾರೆ ಮೊಲಿಯರ್ ತಾತ್ವಿಕ ನಾಟಕದ ಕನ್ನಡ ರೂಪಾಂತರವಾದ "ಅಷಾಢಭೂತಿ" ಮೂರ್ತಿರಾಯರನ್ನು ಬೆಳಗಾಗುವುದರಲ್ಲಿ ಜನಪ್ರಿಯರನ್ನಾಗಿಸಿದ ಕೃತಿ. ಈ ಸಭೆಯು ಅಂಗೀಕರಿಸಿದ ಅಭಿನಂದನಾ ನಿರ್ಣಯದ ಪ್ರತಿಯನ್ನು ಶ್ರೀ ಎ.ಎಸ್. ಮೂರ್ತಿರಾಯರಿಗೆ ಕಳುಹಿಸಿಕೊಡಲಾಗುವುದು. ಈಗ ಗ್ರೂಪ್ ಫೋಟೋ ತೆಗೆಸುವಂಥ ಕಾರ್ಯಕ್ರಮವನ್ನು ನಾಳೆ ಇಟ್ಟುಕೊಂಡಿದ್ದೆವು. ಆದರೆ, ಇವತ್ತೆ ಸದನದ ಕಾರ್ಯಕಲಾಪಗಳ ಕೊನೆಯ ದಿವಸವಾಗಿರುವುದರಿಂದ, ಇವತ್ತು 3-30ಗಂಟೆಗೆ ಗ್ರೂಪ್ ಫೋಟೋ ತೆಗೆಸುವಂಥ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಈಗ ಸಭೆಯನ್ನು ಊಟಕ್ಕೆ ಅಡ್ಜರ್ನ್ ಮಾಡುತ್ತೇನೆ. ಮಾನ್ಯ ಎಲ್ಲಾ ಸದಸ್ಯರಲ್ಲಿ